ಮಾತಿನೊಂದಿಗೆ ಕಾರು ಹಸುರು ಬೆಟ್ಟ, ಹುಲಸಾದ ಹುಲ್ಲು ಹೂಗಳ ಬಯಲು, ವೈನ್ ದ್ರಾಕ್ಷಿಯ ತೋಟ, ಸಿರಿವಂತ ಮರಗಳು, ಅಚ್ಚುಕಟ್ಟಾದ ಕೈಗಾರಿಕಾ ಕಟ್ಟಡ, ತಿಳಿ ನೀರ ನದಿಯ ಅಂಚಿನುದ್ದಕ್ಕೆ ಹೆಚ್ಚು ಸದ್ದಿಲ್ಲದೆ ಸರಾಗವಾಗಿ ಚಲಿಸಿತು.

ಬ್ಲ್ಯಾಕ್‌ಫಾರೆಸ್ಟ್ ಸುಂದರ ಪಟ್ಟಣಗಳ ಬೆಟ್ಟದ ಸಾಲು. ಬೆಟ್ಟದಲ್ಲಿ ಹಲವು ನದಿಗಳು ಹುಟ್ಟಿ ಹರಿಯುತ್ತಿವೆ. ನಡುವೆ ಹಳೆಯ ಕಮಾನು ಸೇತುವೆಯ ನೆಕರ್ ನದಿ. ಕತ್ತಲು ಉಟ್ಟು ನಿಂತ ಎತ್ತರದ ಮರಗಳ ಬೆಟ್ಟದಲ್ಲಿ ಪುಟ್ಟ ಜಲಪಾತವಾಗಿ ಸಳ ಸಳ ಇಳಿವ ಝರಿಗಳು; ಭೂಕುಸಿತ ತಡೆದ ಬೇರುಗಳು. ರತ್ನಗಂಬಳಿ ಹಾಸಿದಂತಿರುವ ಹಸುರು ಪಾಚಿಯ ಇಳಿಜಾರು. ಬೆಟ್ಟದ ತಳದಲ್ಲಿ ಶೊನ್ಯಾಕ್ ಪಟ್ಟಣ. ಪುರಾತನ ಕಟ್ಟಡಗಳ ಪೇಟೆಯ ನಡುವೆ ಕಾರನ್ನು ಪಾರ್ಕ್ ಮಾಡಿದ. ರಸ್ತೆಯಲ್ಲಿ ಕಾಫಿ ಮಗ್ ಹಿಡಿದು ತಿರುಗಾಡುತ್ತಿರುವ ಪ್ರವಾಸಿಗರು. ವೇಗದ ಯುವ ಸೈಕಲ್ ಸವಾರರು. ಟ್ರೆಕ್ಕಿಂಗ್ ವೇಷದಲ್ಲಿರುವ ಚಾರಣಿಗರು. ಮಾರು ಮಾರಿಗೆ ಬರ್ಗರ್, ವೈನ್, ಕಾಫಿ ಹಾಗೂ ಬೀಫ್ ಪರಿಮಳದ ರೆಸ್ಟೊರೆಂಟ್‌ಗಳು. ಟೇಬಲ್ ಮೇಲೆ ಉಳಿದ ಬರ್ಗರ್ ತುಂಡನ್ನು ಎತ್ತೊಯ್ಯಲು ಹೊಂಚು ಹಾಕಿರುವ ಧೃತ್ಯ ಕಾಗೆ. ಮಧ್ಯಾಹ್ನದಲ್ಲೂ ಹಿತವೆನಿಸುವ ಕೋಮಲ ಬಿಸಿಲು. ಅಲ್ಲಾಡುವ ರೆಂಬೆಗಳ ಕೆಳಗೆ ನೆರಳ ಕಣ್ಣಮುಚ್ಚಾಲೆ, ಮೈ ಸವರುವ ಶೀತ ಗಾಳಿ. ನದಿಯ ಆಲಾಪ. ಮಂಜು ಮೋಡವಾಗಿ ಹಾರುವ ಲೀಲೆ. ಚಿತ್ರದ ಚೌಕಟ್ಟು ನಿಲ್ಲಿಸಿದಂತಿರುವ ಕಲ್ಲಿನ ಮಜಭೂತ ಮನೆಗಳ ಸ್ಟ್ರೀಟ್. ಬೆಟ್ಟದ ನೆರಳು ಚಾಚಿದ ಪ್ರಾಚೀನ ಚರ್ಚ್ ಸ್ಟ್ರೀಟ್ ಅದು. ಪಕ್ಕದಲ್ಲಿ ಕರಕುಶಲ ಕಸೂತಿಯಲ್ಲಿ ವಿಕಾಸವಾದ ಗ್ರಾಮದ ಕಥೆ ನಿರೂಪಿಸುವ ಮ್ಯೂಜಿಯಂ. ಕಣ್ತೆರೆದೇ ಕಾಣುವ ಕನಸಿನ ಲೋಕದಲ್ಲಿ ನಡೆದರು. ಗಡಿಯಾರ ಗೋಪುರದ ಬಾಗಿಲು ಪ್ರವೇಶಿಸುವಾಗ ಸುಬ್ರೊ, 'ಫ್ರೆಡ್ರಿಕ್ ಹೇಳಿದ ಕ್ಲಿಯೊ ಊರಿದು' ಎಂದ. ರಾವ್ ಬೆರಗಿನಲ್ಲಿ ಮಗುವಿನಂತಾಗಿದ್ದರು.

ಅದೊಂದು ಅಪೂರ್ವ ಕುಕೂ ಗಡಿಯಾರ ಗ್ರಾಮ. ಬೆಟ್ಟದ ಮರಗಳಿಂದ ಸ್ಥಳೀಯರೇ ಕೈ ಕೈಗಾರಿಕೆಯಿಂದ ತಯಾರಿಸಿದ ವಿವಿಧ ರೀತಿಯ ಗಡಿಯಾರಗಳ ಅಂಗಡಿಗಳ ಸಾಲು. ಆಟಿಕೆ ಮನೆ ಮಂಟಪದ ನಡುವೆ ಗಡಿಯಾರದ ಗೋಲ ಮುಖ. ಕೋಗಿಲೆ ಹಾಡಿದಂತೆ ನುಡಿಯುವ ಗಂಟೆ. ಗಡಿಯಾರದ ರೂಪ ಧರಿಸಿದ ಕಾಡು ಕಾಲದ ಲೆಕ್ಕಾಚಾರದಲ್ಲಿ ತೊಡಗಿದೆ. ಕೋಗಿಲೆಗಳ ಸಂಕುಲ ಈ ಜಾತ್ರೆಯಲ್ಲಿ ಸದಾ ಸಮೂಹ ಕಲರವದಲ್ಲಿ ವಸಂತ ಹಾಡುತ್ತಿದೆ. ಕಲ್ಯಾಣಿ ಕೊಂಡು ತಂದಿದ್ದ ಉಡುಗರೆಯ ಕುಕೂ ವಾಚು ಈ ಗ್ರಾಮದ್ದು ಎಂದನಿಸುತ್ತಲೇ ರಾವ್ ಎದೆ ತುಂಬಿ ಬಂತು. ವ್ಯಾಪಾರ ಭರದಿಂದ ನಡೆದಿತ್ತು. 'ಮದುವೆಗೆ ಮುಂಚೆ ದೇಶಪಾಂಡೆ ಇಲ್ಲಿ ಗಡಿಯಾರದ ಅಂಗಡಿ ಇಟ್ಟಿದ್ದರು' ಎಂದ.

'ಕ್ಲಿಯೊ ಸ್ಟುಡಿಯೊ' ಎಂದು ಬರೆದ ನೀಲಿ ಫಲಕ ಅಂಟಿಸಿದ ಹಳೆಯ ಕಟ್ಟಡವನ್ನು ಸುಬ್ರೊ ಅಪ್ಪನಿಗೆ ತೋರಿಸಿದ. ಹೆಜ್ಜೆ ಹಾಕುತ್ತಿದ್ದಂತೆ ಆರ್ಟ್ ಗ್ಯಾಲರಿಯಲ್ಲಿ ಸಂಚರಿಸುತ್ತಿದ್ದಂತಾಯಿತು.

ಮುದುಕರನ್ನೂ ಯುವಕರ ರನ್ನಾಗಿಸುವ ಮೋಹಕ ಪಟ್ಟಣದ ಮಾಯಾ ಸೌಂದರ್ಯ ರಾವ್‌ರನ್ನು ಸ್ಪರ್ಶಿಸಿತ್ತು. 'ಸುಸ್ತಾಯ್ತಾ?' ಸುಬ್ರೊ ಅವರ ನಡಿಗೆಯಲ್ಲಿ ಸಣ್ಣ ಅಸ್ವಸ್ಥತೆ ಕಂಡು ಕಾಳಜಿ ಮಾಡಿದ. 'ಇಲ್ಲಾ' ಎಂದರು. ಅದು ಒಣಗಿದ ನಾಲಗೆಯಲ್ಲಿ ಹುಟ್ಟಿದ ಶಬ್ದವಾಗಿತ್ತು. ಕಾಫಿ ಕುಡಿದರು.

